ಸುದ್ದಿ ಸಂಚಯ

# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಸಾರಾಂಶ - 2020-2021

**ರಾ**ಮಕೃಷ್ಣ ಮಿಷನ್ನಿನ **112ನೇ ವಾರ್ಷಿಕ ಸಭೆ**ಯು 2022ರ ಫೆಬ್ರವರಿ 20ರ ಭಾನುವಾರ ಮಧ್ಯಾಹ್ನ 3.30ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಈ ಸಭೆಯಲ್ಲಿ ಮಂಡಿಸಲಾದ 2020-21ನೇ ವಿತ್ತೀಯ ವರ್ಷದ ಅವಧಿಯಲ್ಲಿ ನಡೆದ ರಾಮಕೃಷ್ಣ ಮಿಷನ್ನಿನ ಕಾರ್ಯಗಳ ಬಗೆಗಿನ ವರದಿಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

**೧) ರಾಮಕೃಷ್ಣ ಮಿಷನ್ನಿಗೆ ಈ ಕೆಳಗಿನ ಪ್ರಶಸ್ತಿಗಳು ಲಭಿಸಿವೆ:** 1) ಭಾರತ ಸರ್ಕಾರದ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಂವರ್ಕ್ (NIRF) ಸಂಸ್ಥೆಯು 2020ನೇ ವರ್ಷಕ್ಕಾಗಿ ನಮ್ಮ ಈ ಕೆಳಗಿನ ವಿಜ್ಞಾನ ಮತ್ತು ಕಲಾ ಕಾಲೇಜುಗಳಿಗೆ ಉತ್ತಮ ಸ್ಥಾನವನ್ನು ನೀಡಿದೆ: ಬೇಲೂರು ಮಠದ **ಶಾರದಾಪೀಠ** ಕಾಲೇಜಿಗೆ 7ನೇ ಸ್ಥಾನ, ರಹರಾ (ಕೊಲ್ಕತ್ತ) ವಿದ್ಯಾಸಂಸ್ಥೆಗಳಿಗೆ 11ನೇ ಸ್ಥಾನ, **ನರೇಂದ್ರಪುರ** (ಕೊಲ್ಕತ್ತ) ಸಂಸ್ಥೆಗಳಿಗೆ 20ನೇ ಸ್ಥಾನ ಹಾಗೂ ಕೊಯಮತ್ತೂರು ಕೇಂದ್ರದ ವಿದ್ಯಾಸಂಸ್ಥೆಗಳಿಗೆ 65ನೇ ಸ್ಥಾನ. 2) **ಭುವನೇಶ್ವರ** ಕೇಂದ್ರ ಹಾಗೂ **ಮಾಲ್ದಾ** (ಪಶ್ಚಿಮ ಬಂಗಾಳ) ಕೇಂದ್ರದ ಹೈಸ್ಕೂಲುಗಳು ಅತ್ಯುತ್ತಮ ಶಾಲಾ ಪ್ರಶಸ್ತಿಯನ್ನು ಪಡೆದಿವೆ; ಆಯಾ ರಾಜ್ಯಗಳು ಅವಕ್ಕೆ 1,00,000/- ನಗದು ಬಹುಮಾನವನ್ನೂ ನೀಡಿವೆ. 3) **ಚೆನ್ನೈ** ಮಠವು ನಡೆಸುತ್ತಿರುವ ಪ್ರಾಥಮಿಕ ವಿದ್ಯಾಲಯಕ್ಕೆ ತಮಿಳುನಾಡು ಸರ್ಕಾರದ ಶಿಕ್ಷಣ ಇಲಾಖೆಯು ಅತ್ಯುತ್ತಮ ಶಾಲಾ ಪ್ರಶಸ್ತಿಯನ್ನು ನೀಡಿದೆ. 4) **ವೃಂದಾವನ** ಕೇಂದ್ರದದ ಆಸ್ಪತ್ರೆಯ ಮೋಲಿಕ್ಯುಲರ್ ಲ್ಯಾಬೋರೇಟರಿಗೆ ನ್ಯಾಶನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಆಂಡ್ ಕ್ಯಾಲಿಬರೇಶನ್ ಲ್ಯಾಬೋರೇಟರೀಸ್ (NABL) ಸಂಸ್ಥೆಯು ಮಾನ್ಯತೆ ನೀಡಿದೆ. 5) ಅಸ್ಸಾಮಿನ **ಕರೀಂಗಂಜ್** ಆಶ್ರಮಕ್ಕೆ ಮುಖ್ಯಮಂತ್ರಿಗಳ 'ಅಭಿವೃದ್ಧಿಪರ ಸಾಮೂಹಿಕ ಕ್ರಿಯಾಪ್ರಶಸ್ತಿ' ಲಭಿಸಿದೆ.

**೨) ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರಗಳು:** 1) ರಾಜಸ್ಥಾನದ **ಅಜ್ಮೀರ್** ನಲ್ಲಿ ಹಾಗೂ ಪಶ್ಚಿಮ ಬಂಗಾಳದ **ರಾಯ್‌ಗಂಜ್** ನಲ್ಲಿ ಹೊಸ ಮಿಷನ್ ಕೇಂದ್ರಗಳು ಆರಂಭಗೊಂಡಿವೆ. 2) ತ್ರಿಪುರಾ ರಾಜ್ಯದ ಅಗರ್ತಲದಲ್ಲಿರುವ ವಿವೇಕನಗರ ಆಶ್ರಮದ ಉಪಶಾಖೆಯಾಗಿದ್ದ **ಧಾಲೇಶ್ವರ** ಕೇಂದ್ರವನ್ನು ಪ್ರತ್ಯೇಕ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. 3) ಪಶ್ಚಿಮ ಬಂಗಾಳದ ರಾಮಹರಿಪುರ ಕೇಂದ್ರದ ಉಪಶಾಖೆಯಾಗಿದ್ದ **ಅಮರಕಾನನ** (ಬಾಂಕುರ ಜಿಲ್ಲೆ) ಕೇಂದ್ರವನ್ನು ಪ್ರತ್ಯೇಕ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. 4) ಪಶ್ಚಿಮ ಬಂಗಾಳದ ಬೀರಭೂಮ್ ಜಿಲ್ಲೆಯ **ಬೋಲ್ಪುರ**ದಲ್ಲಿ ಹೊಸ ರಾಮಕೃಷ್ಣ ಮಠ ಶಾಖೆಯನ್ನು ಆರಂಭಿಸಲಾಗಿದೆ. 5) ಚೆನ್ನೈ ರಾಮಕೃಷ್ಣ ಮಠದ ಉಪಶಾಖೆಯಯನ್ನು ತಮಿಳುನಾಡಿನ **ತಂಜಾವೂರಿ**ನಲ್ಲಿ ಆರಂಭಿಸಲಾಗಿದೆ.

**೩) ಹೊಸ ಬೆಳವಣಿಗೆಗಳು :** 1) **ಚೆನ್ನೈ ಸ್ಟೂಡೆಂಟ್ಸ್ ಹೋಂ** ಅಲ್ಲಿನ ಹೈಸ್ಕೂಲು ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಲಿಯುತ್ತಿರುವ ಆವಾಸಿ ವಿದ್ಯಾರ್ಥಿಗಳಿಗೆ 630 ಟ್ಯಾಬ್ಲೆಟ್‌ಗಳನ್ನು ಅಗತ್ಯವಿರುವ ತಂತ್ರಾಂಶಗಳ ಸ್ಥಾಪನೆಯೊಂದಿಗೆ ವಿತರಿಸಿದೆ. ಈ ಮೂಲಕ ಕೋವಿಡ್-19 ಸೋಂಕಿನ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು. 2) **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಭಾರತೀಯ ಸಂಸ್ಕತಿ, ಪರಂಪರೆ ಮತ್ತು ಆಧ್ಯಾತ್ಮಿಕತೆಯ ಆದರ್ಶವನ್ನು ಯುವಜನತೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಬಿತ್ತರಿಸಲು ಸಹಾಯಕವಾಗುವಂತೆ **'ಇಯಲ್, ಇಸೈ, ನಾಡಗಂ'** ಎಂಬ ಆನ್‌ಲೈನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. 3) ಬೇಲೂರು ಮಠದಲ್ಲಿರುವ ವಿವೇಕಾನಂದ ವಿಶ್ವವಿದ್ಯಾಲಯವು (**RKMVERI**) ಕೊಲ್ಕತ್ತದಲ್ಲಿರುವ ಅದರ ನರೇಂದ್ರಪುರ ಕ್ಯಾಂಪಸ್‌ನಲ್ಲಿ ವೈದ್ಯಕೀಯ ಜೀವತಂತ್ರಜ್ಞಾನ ವಿಷಯದಲ್ಲಿ (MdBT) ಎಂ.ಎಸ್ಸಿ. ಕೋರ್ಸ್ ಆರಂಭಿಸಿದೆ; ಹಾಗೂ ರಾಂಚಿ ಕ್ಯಾಂಪಸ್‌ನಲ್ಲಿ ಪ್ಯಾಥೋಲಜಿ ಲ್ಯಾಬೋರೇಟರಿ, ಮೋಲಿಕ್ಯುಲರ್ ಬಯಾಲಜಿ ಹಾಗೂ ಕ್ವಾಲಿಟಿ/ಕಂಟ್ರೋಲ್ ಲ್ಯಾಬೋರೇಟರಿ ಇವುಗಳನ್ನು ಸ್ಥಾಪಿಸಿದೆ. 4) **ರೋರ್ಕೆಲಾ** ಕೇಂದ್ರವು ಆನ್‌ಲೈನ್ ತರಬೇತಿ, ಪ್ರೇರಣಾತ್ಮಕ ಶಿಬಿರ ಹಾಗೂ ಶೈಕ್ಷಣಿಕ ತರಗತಿಗಳನ್ನು ನಡೆಸಲು ಸಂಚಾರಿ ದೃಶ್ಯ-ಶ್ರಾವ್ಯ ಘಟಕವನ್ನು ಆರಂಭಿಸಿದೆ. 5) **ಶಿಲ್ಲಾಂಗ್** ಕೇಂದ್ರವು ಖಾಸಿ, ಇಂಗ್ಲಿಷ್ ಹಾಗೂ ಹಿಂದೀ ಭಾಷೆಗಳಲ್ಲಿರುವ ತ್ರಿಭಾಷಾ ಆನ್‌ಲೈನ್ ಪತ್ರಿಕೆ **'ಕಾ-ಜಿಂಗ್‌ಶ್ಯಾ - ಬೆಳಕು'** ಅನ್ನು ಆರಂಭಿಸಿದೆ.

**೪) ಶೈಕ್ಷಣಿಕ ಕಾರ್ಯ :** ರಾಮಕೃಷ್ಣ ಮಠ ಮತ್ತು ಮಿಷನ್ ಒಟ್ಟು 2,31,868 ಮಂದಿ ವಿದ್ಯಾರ್ಥಿಗಳಿಗೆ 539 ಶಾಲೆ, ಕಾಲೇಜುಗಳ ಮೂಲಕ ಹಾಗೂ 1056 ಅನೌಪಚಾರಿಕ ವಿದ್ಯಾಕೇಂದ್ರಗಳ ಮೂಲಕ ಶೈಕ್ಷಣಿಕ ಸೇವೆಯನ್ನು ಮಾಡಿದೆ. ಇದಕ್ಕೆ 451.78 ಕೋಟಿ ರೂ. ವೆಚ್ಚವುಂಟಾಗಿದೆ.

**೫) ವೈದ್ಯಕೀಯ ಕಾರ್ಯ:** ರಾಮಕೃಷ್ಣ ಮಠ ಮತ್ತು ಮಿಷನ್ ತನ್ನ 14 ಆಸ್ಪತ್ರೆಗಳಲ್ಲಿ 72,382 ಒಳರೋಗಿಗಳಿಗೆ, ಹಾಗೂ 123 ಡಿಸ್ಪೆನ್ಸರಿಗಳ ಮೂಲಕ, 44 ಮೊಬೈಲ್ ವಾಹನಗಳ ಮೂಲಕ ಹಾಗೂ 356 ವೈದ್ಯಕೀಯ ಶಿಬಿರಗಳ ಮೂಲಕ 31,90,265 ಹೊರರೋಗಿಗಳಿಗೆ ಚಿಕಿತ್ಸೆ ನೀಡಿದೆ. 7 ನರ್ಸ್ ಟ್ರೈನಿಂಗ್ ಸೆಂಟರ್‌ಗಳ ಮೂಲಕ 776 ಮಂದಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ. 2 ವೈದ್ಯಕೀಯ ಸಂಶೋಧನ ಕೇಂದ್ರಗಳ ಮೂಲಕ 168 ವಿದ್ಯಾರ್ಥಿಗಳು ಸಂಶೋಧನ ಕಾರ್ಯವನ್ನು ಕೈಗೊಂಡಿದ್ದಾರೆ. ಒಟ್ಟು 262.11 ಕೋಟಿ ರೂ. ಈ ಕಾರ್ಯಗಳಿಗಾಗಿ ವ್ಯಯವಾಗಿದೆ.

**೬) ಪರಿಹಾರ ಹಾಗೂ ಪುನರ್ವಸತಿ ಕಾರ್ಯ:** ರಾಮಕೃಷ್ಣ ಮಠ ಮತ್ತು ಮಿಷನ್ ಈ ಕೆಳಗಿನ ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳನ್ನು ಕೈಗೊಂಡಿದ್ದು, ಇದಕ್ಕಾಗಿ 34.20 ಕೋಟಿ ರೂ. ವ್ಯಯವಾಗಿದ್ದು, 33.11 ಲಕ್ಷ ಜನರು ಇದರ ಲಾಭ ಪಡೆದಿದ್ದಾರೆ:

1. **ಕೋವಿಡ್-19 ಪರಿಹಾರ :** * ಒಟ್ಟು 4,51,476 ಕುಟುಂಬಗಳಿಗೆ ಇದರಿಂದ ಲಾಭವಾಗಿದೆ * ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕೇಂದ್ರ ಹಾಗೂ ಭಾರತದ ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿರುವ ಅದರ 127 ಶಾಖಾಕೇಂದ್ರಗಳು ಆಹಾರ ಪೊಟ್ಟಣಗಳು, ತರಕಾರಿ, ಹಣ್ಣು, ತಿಂಡಿ ಪೊಟ್ಟಣಗಳು, ನೀರಿನ ಬಾಟಲಿ, ಮಾಸ್ಕ್, ಸ್ಯಾನಿಟೈಸರ್‌ಗಳು, ಸಾಬೂನು, ಪಾತ್ರೆ ತೊಳೆಯುವ ಪೌಡರ್, ಬಟ್ಟೆಬರೆ, ಬೇಯಿಸಿದ ಆಹಾರ ಪದಾರ್ಥ ಇವನ್ನು ವಿತರಿಸಿವೆ. * ನಮ್ಮ ಲಕ್ನೋ ಹಾಗೂ ವೃಂದಾವನ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಕೋವಿಡ್ ವಾರ್ಡ್‌ಗಳನ್ನು ತೆರೆಯಲಾಯಿತು. * ಹರಿದ್ವಾರದ ಕಂಖಲ್ ಆಶ್ರಮವು ಫ್ಲೂ ಆಸ್ಪತ್ರೆಯನ್ನು ಆರಂಭಿಸಿದೆ. 2. **ಚಂಡಮಾರುತ ಪರಿಹಾರ** : ನಿಸರ್ಗ (ಗುಜರಾತ್), ನಿವಾರ್ ಹಾಗೂ ಬುರೇವಿ (ತಮಿಳುನಾಡು), ಅಂಫಾನ್ (ಪ. ಬಂಗಾಳ). 3. **ಅಗ್ನಿದುರಂತ ಪರಿಹಾರ 4. ನೆರೆ ಪರಿಹಾರ 5. ಸಾಮಾನ್ಯ ಸಂತ್ರಸ್ತ ಪರಿಹಾರ 6. ಗಂಗಾಸಾಗರ ಮೇಳ ಪರಿಹಾರ 7. ಚಳಿಗಾಲದ ಪರಿಹಾರ ಕಾರ್ಯ 8. ಆರ್ಥಿಕ ಪುನರ್ವಸತಿ 9. ಚಂಡಮಾರುತ ಪುನರ್ವಸತಿ ಕಾರ್ಯ** : ಬುಲ್‌ಬುಲ್ ಚಂಡಮಾರುತ ಪುನರ್ವಸತಿ, ಅಂಫಾನ್ ಚಂಡಮಾರುತ ಪುನರ್ವಸತಿ.

**೭) ಗ್ರಾಮೀಣಾಭಿವೃದ್ಧಿ ಹಾಗೂ ಬುಡಕಟ್ಟು ಅಭಿವೃದ್ಧಿ ಕಾರ್ಯ:** ರಾಮಕೃಷ್ಣ ಮಠ ಮತ್ತು ಮಿಷನ್ ಗ್ರಾಮೀಣಾಭಿವೃದ್ಧಿ ಹಾಗೂ ಬುಡಕಟ್ಟು ಅಭಿವೃದ್ಧಿ ಕಾರ್ಯಗಳನ್ನು 1) ಸಾಮಾಜಿಕ ಬೆಳವಣಿಗೆ, 2) ವೈದ್ಯಕೀಯ, 3)ಶೈಕ್ಷಣಿಕ, ಹಾಗೂ 4) ಸಾಮಾನ್ಯ ಅಭಿವೃದ್ಧಿ — ಈ ಕ್ಷೇತ್ರಗಳಲ್ಲಿ ಮುಂದುವರಿಸಿವೆ. ಒಟ್ಟು 71.62 ಕೋಟಿ ರೂ.ಗಳನ್ನು ಈ ಕಾರ್ಯಗಳಿಗಾಗಿ ಖರ್ಚುಮಾಡಲಾಗಿದೆ. ಸುಮಾರು 33.95 ಲಕ್ಷ ಜನರು ಇದರ ಪ್ರಯೋಜನ ಪಡೆದಿರುತ್ತಾರೆ.

**೮) ಸಾಮಾನ್ಯ ಅಭಿವೃದ್ಧಿ ಕಾರ್ಯ:** ರಾಮಕೃಷ್ಣ ಮಠ ಮತ್ತು ಮಿಷನ್ ಹಲವು ಬಗೆಯ ಸಾಮಾನ್ಯ ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ್ದು, ಅವುಗಳಲ್ಲಿ ಈ ವಸ್ತುಗಳ ವಿತರಣೆ ಪ್ರಮುಖವಾಗಿವೆ: 1) ಒಣ ಆಹಾರಗಳ ಕಿಟ್, 2) ಆರೋಗ್ಯವರ್ಧಕ ಕಿಟ್, 3) ಶೈಕ್ಷಣಿಕ ಕಿಟ್, 4) ಬಟ್ಟೆಬರೆ ಮತ್ತು ಹೊದಿಕೆಗಳು, 5) ತ್ರಿಚಕ್ರ ಸೈಕಲ್‌ಗಳು 6) ಹೊಲಿಗೆ ಯಂತ್ರಗಳು, 7) ಬೇಯಿಸಿದ ಆಹಾರ ಪದಾರ್ಥಗಳು, 8) ಶೈಕ್ಷಣಿಕ ಸ್ಕಾಲರ್‌ಶಿಪ್‌ಗಳು, 9) ಸಂತ್ರಸ್ತರಿಗೆ ಆರ್ಥಿಕ ಸಹಾಯ. ಇದಕ್ಕೆ ರೂ. 21.30 ಕೋಟಿ ವೆಚ್ಚ ತಗಲಿದ್ದು, ಸುಮಾರು 27.61 ಲಕ್ಷ ಮಂದಿ ಇದರ ಲಾಭ ಪಡೆದಿದ್ದಾರೆ.

**೯) ಪ್ರಕಟಣೆ ಮತ್ತು ಪ್ರಸಾರ :** ರಾಮಕೃಷ್ಣ ಮಠ ಮತ್ತು ಮಿಷನ್ ಮಾನವೀಯ ಮೌಲ್ಯ ಶಿಕ್ಷಣ ಕುರಿತಂತೆ 8,387 ತರಗತಿಗಳನ್ನು ನಡೆಸಿದ್ದು, ಅದರಲ್ಲಿ 16,63,263 ಜನರು ಭಾಗವಹಿಸಿದ್ದಾರೆ. ನಮ್ಮ 127 ಸಾರ್ವಜನಿಕ ಗ್ರಂಥಾಲಯಗಳಲ್ಲಿ 1,38,300 ಜನರು ಲಾಭ ಪಡೆದಿದ್ದಾರೆ. ನಮ್ಮ ಪ್ರಕಟಣ ಕೇಂದ್ರಗಳು 80 ಹೊಸ ಗ್ರಂಥಗಳನ್ನು ಹಾಗೂ 589 ಮರುಮುದ್ರಣಗಳನ್ನು ಪ್ರಕಟಿಸಿವೆ. 13 ಭಾಷೆಗಳಲ್ಲಿರುವ 16 ಪತ್ರಿಕೆಗಳು ಸುಮಾರು 2,19,697 ಚಂದಾದಾರರನ್ನು ಹೊಂದಿವೆ. ಒಟ್ಟು 10.35 ಕೋಟಿ ರೂ. ಪ್ರಕಟಣಾ ಕಾರ್ಯಗಳಿಗಾಗಿ ವ್ಯಯವಾಗಿದೆ.

**೧೦) ವಿದೇಶಗಳಲ್ಲಿ ನಡೆದ ಚಟುವಟಿಕೆಗಳು :** 1) ಆಸ್ಟ್ರೇಲಿಯಾದ ಸಿಡ್ನಿಯಲ್ಲಿರು ವೇದಾಂತ ಸೆಂಟರ್‌ನ ಮಾರ್ಗದರ್ಶನದಲ್ಲಿ ಕೆಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ **ಅಡಿಲೇಡ್, ಬ್ರಿಸ್ಬೇನ್, ಕ್ಯಾನ್‌ಬೆರಾ, ಮೆಲ್ಬೋರ್ನ್** ಹಾಗೂ **ಪರ್ತ್** ಪ್ರದೇಶಗಳಲ್ಲಿನ ವೇದಾಂದ ಸೆಂಟರ್‌ಗಳನ್ನು ಅಧಿಕೃತವಾಗಿ ಸಿಡ್ನಿ ಕೇಂದ್ರದ ಉಪಶಾಖೆಗಳಾಗಿ ಪರಿಗಣಿಸಲಾಗಿದೆ. 2) ಬಾಂಗ್ಲಾದೇಶದ **ಮೈಮನ್‌ಸಿಂಗ್** ಕೇಂದ್ರವು 'ವಿವೇಕಾನಂದ ಅನಾಥ ಆಶ್ರಮ' ಎಂಬ ಒಂದು ಅನಾಥಾಶ್ರಮವನ್ನು ಬುಡಕಟ್ಟು ಮಕ್ಕಳಿಗಾಗಿ ಆರಂಭಿಸಿದೆ. 3) ಅಮೆರಿಕದ **ಪೋರ್ಟ್‌ಲ್ಯಾಂಡ್** ಕೇಂದ್ರವು ತನ್ನ ಸ್ಕಾಪೋಸ್‌ನಲ್ಲಿರುವ ಕುಟೀರದ ಸಮೀಪದ 169 ಎಕರೆ ಪ್ರದೇಶವನ್ನು ಖರೀದಿಸಿದೆ. 4) ಬಾಂಗ್ಲಾ ದೇಶ, ಫಿಲಿಪ್ಪೈನ್ಸ್, ಸಿಂಗಾಪುರ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಹಾಗೂ ಝಾಂಬಿಯಾ ದೇಶಗಳ ಶಾಖಾಕೇಂದ್ರಗಳು ಕೋವಿಡ್-19 ಪರಿಹಾರ ಕಾರ್ಯಗಳನ್ನು ನಡೆಸಿವೆ. ಈ ಕೇಂದ್ರಗಳು ಒಣ ಆಹಾರ ಪದಾರ್ಥಗಳ ಕಿಟ್, ಬೇಯಿಸಿದ ಆಹಾರ, ಸಾಬೂನು, ಕೈ ತೊಳೆಯುವ ಸಾಬೂನಿನ ಬಾಟಲಿ, ಮಾಸ್ಕ, ಗ್ಲೌಸ್, ಸ್ವರಕ್ಷಣಾ ಕಿಟ್‌ಗಳು ಹಾಗೂ ಇತರ ಅಗತ್ಯ ವಸ್ತುಗಳನ್ನು ಸಂತ್ರಸ್ತರಿಗೆ ವಿತರಿಸಿವೆ. 5) 23 ದೇಶಗಳಲ್ಲಿ ಹರಡಿರುವ ಎಲ್ಲ 65 ಕೇಂದ್ರಗಳು ವೈದ್ಯಕೀಯ, ಶೈಕ್ಷಣಿಕ, ಸಾಂಸ್ಕೃತಿಕ, ಅಭಿವೃದ್ಧಿ, ನೈತಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ವಿವಿಧ ಸೇವಾಕಾರ್ಯಗಳನ್ನು ನಡೆಸಿವೆ.

ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಅತ್ಯಂತ ಕಾಳಜಿಯಿಂದ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವ ನಮ್ಮ ಸದಸ್ಯರಿಗೂ, ಹಿತೈಷಿಗಳಿಗೂ, ಭಕ್ತರಿಗೂ ಈ ಸಂದರ್ಭದಲ್ಲಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

20 ಫೆಬ್ರವರಿ, 2022

(ಸ್ವಾಮಿ ಸುವೀರಾನಂದ)

ಪ್ರಧಾನ ಕಾರ್ಯದರ್ಶಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020